ಮಾಡಿಲ್ಲವೆಂದು ಅವರು ನೋಟಿಸ್ ಕೊಟ್ಟಿದ್ದಾರೆ. ತಾವು ಬೇಕಾದರೆ ನೋಡಿ, ಇದರ ಬಗ್ಗೆ ನಾನೂ ಕೂಡ ರಿವ್ಯೂ ಮಾಡಿದ್ದೇನೆ. ಇದನ್ನು ತಿಳಿಯದೇ ಅದಕ್ಕಾಗಿ ಅವರ ಮೇಲೆ ಬಿದ್ದರೆ, ಹೇಗೆ?

ಶ್ರೀ ಹೆಚ್.ಡಿ. ದೇವೇಗೌಡ : ಮಾನ್ಯ ಖರ್ಗೆಯವರೆ, ದಯಮಾಡಿ ತಿಳಿದುಕೊಳ್ಳಿ, ನಾನು ಏನು ಹೇಳಿದೆಯೆಂದರೆ ಅಲ್ಲಿ ಯಾರು ರಾಜಕೀಯ ಮಾಡುತ್ತಿದ್ದಾರೆ ಅದರ ವಿವರಣೆ ಹೇಳಲಿಕ್ಕೆ ಹೋದಿರಿ. ನಾನು ಒಂದೇ ವಾಕ್ಯದಲ್ಲಿ ಹೇಳಿದೆ, ಬೇರೆಲ್ಲಾ ಯೋಜನೆಗಳಿಗಿಂತಲೂ ಇಲ್ಲಿ ಹೆಚ್ಚು ಸೌಲಭ್ಯಗಳು ಸಿಗುತ್ತವೆ. ಇದಕ್ಕೆ ಕಾರಣ ಏನಾದರೂ ಇರಲಿ. ಇದಕ್ಕೆ ನೀವು ಒಪ್ಪಿದ್ದೀರಿ, ನಾವು ಒಪ್ಪಿದ್ದೇವೆ ಎನ್ನುವ ಕಾರಣ ಏನೇ ಇರಲಿ, ಬೇರೆ ಎಲ್ಲಾ ಯೋಜನೆಗಳಿಗಿಂತ ಇಲ್ಲಿ ಜಮೀನು ಕಳೆದುಕೊಳ್ಳತಕ್ಕಂಥವರಿಗೆ ಹೆಚ್ಚಿನ ಸವಲತ್ತುಗಳು ಸಿಗುತ್ತಿವೆ ಎನ್ನುವಂಥ ಮಾತನ್ನು ನಾನು ಹೇಳಿದೆ. ಅದನ್ನು ಮತ್ತೆ ಅದಕ್ಕೆ ಚರ್ಚೆ ಮಾಡುವುದಕ್ಕೆ ಹೋಗುವುದು ಬೇಡ ಎಂದು ಹೇಳಿದೆ.

ವಿಜಾಪುರದಲ್ಲಿ ಕಳ್ಳತನದ ಹಾವಳಿ

68 - ಶ್ರೀ ಬಸವನಗೌಡ ಪಾಟೀಲ್ (ವಿಜಾಪುರ) : ಮಾನ್ಯ ಗೃಹ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) *ವಿಜಾಪುರ ನಗರದಲ್ಲಿ ಕಳ್ಳತನದ ಹಾವಳಿ ಹೆಚ್ಚಾಗಿರುವುದು ಸರಕಾರದವರ ಗಮತಕ್ಕೆ ಬಂದಿದೆಯೇ? ಹಾಗಿದ್ದಲ್ಲಿ ಇದನ್ನು ತಡೆಗಟ್ಟಲು ಸರಕಾರದವರು ತೆಗೆದುಕೊಂಡ ಕ್ರಮಗಳೇನು?*

ಆ) *ಹೆಚ್ಚುತ್ತಿರುವ ಬಡಾವಣೆಗಳಲ್ಲಿ ಹೊಸ ಪೋಲೀಸ್ ಠಾಣೆ ಸ್ಥಾಪಿಸಲು ಸರ್ಕಾರದವರು ಕೈಗೊಂಡಿರುವ ಕ್ರಮಗಳೇನು?*

ಇ) *ನಗರದಲ್ಲಿ ಮಹಿಳಾ ಪೋಲೀಸ್ ಠಾಣೆ ಮಂಜೂರು ಮಾಡುವುದಕ್ಕೆ ಸರ್ಕಾರದವರು ಪರಿಶೀಲಿಸುವರೇ?*

ಶ್ರೀ ಪಿ.ಜಿ.ಆರ್. ಸಿಂಧ್ಯ (ಗೃಹ ಸಚಿವರು) :

ಅ) ಹೌದು, ಸ್ವಲ್ಪ ಮಟ್ಟಿಗೆ ನಿಜ.

ಅಪರಾಧಗಳನ್ನು ತಡೆಗಟ್ಟುವ ಪ್ರಯುಕ್ತ ಹಗಲು ಮತ್ತು ರಾತ್ರಿ ಗಸ್ತುಗಳನ್ನು ಪುನರ್ ವಿಂಗಡಿಸಿದೆ. ರಾತ್ರಿ ಸಮಯದಲ್ಲಿ ಬೀಟ್ ಪರಿಶೀಲನೆಗಾಗಿ ಶಹರವನ್ನು ಎರಡು ಭಾಗವಾಗಿ ವಿಂಗಡಿಸಿದ್ದು, ಪ್ರತಿ ಬಾಗಕ್ಕೆ ಒಬ್ಬ ಪಿ.ಎಸ್.ಐ.ರವರನ್ನು ಪರಿಶೀಲನೆಗಾಗಿ ನೇಮಿಸಿದ್ದು, ಇವರ ಇನ್ಸಪೆಕ್ಟರ್‌ರನ್ನು ಪ್ರತಿದಿನ ನೇಮಿಸುತ್ತಿದ್ದು, ವ್ಯವಸ್ಥಿತ ರೀತಿಯಲ್ಲಿ ಪೂರ್ವಸಜಾ ಆಸಾಮಿಗಳನ್ನು ರಾತ್ರಿ ವೇಳೆಯಲ್ಲಿ ತಪಾಸಣೆ ಮಾಡುತ್ತಿದ್ದು, ಅಪರಾಧಗಳನ್ನು ತಡೆಗಟ್ಟಲು ಪ್ರಯತ್ನಿಸಲಾಗಿದೆ.

ಆ) ಪ್ರತಿವರ್ಷ ರಾಜ್ಯದಲ್ಲಿ ಹಣಕಾಸಿನ ಲಭ್ಯತೆಯನ್ನು ಅನುಸರಿಸಿ 15-20 ಪೋಲೀಸ್ ಠಾಣೆ ತೆಗೆಯಲಾಗುತ್ತಿದೆ. ಇದನ್ನು ರಾಜ್ಯದ ಎಲ್ಲ ಬೇಡಿಕೆಗಳ ಆದ್ಯತೆ ಅಗತ್ಯತೆಯನ್ನು ಅನುಸರಿಸಿ

ಮಾಡಲಾಗುತ್ತದೆ. ವಿಜಾಪುರದ ಹೆಚ್ಚುತ್ತಿರುವ ಬಡಾವಣೆಗಳ ಅಗತ್ಯವನ್ನು ಅವುಗಳ ಜತೆ ಪರಿಶೀಲಿಸಲಾಗುವುದು.

೫) ಪ್ರತಿ ಜಿಲ್ಲೆಗೆ ಒಂದರಂತೆ ಮಹಿಳಾ ಠಾಣೆ ಸ್ಥಾಪಿಸುವುದು ಸರ್ಕಾರದ ಉದ್ದೇಶವಾಗಿದೆ. ವಿಜಾಪುರ ಜಿಲ್ಲೆಯ ಮಹಿಳಾ ಠಾಣೆಯನ್ನು ವಿಜಾಪುರ ನಗರದಲ್ಲಿ ತೆರೆಯಲಾಗುವುದು. ಆದರೆ ಈ ಸ್ಥಾಪನೆ ಹಣಕಾಸಿನ ಲಭ್ಯತೆಯನ್ನು ಅನುಸರಿಸಿ ಮಾಡಲಾಗುವುದು.

ಶ್ರೀ ಬಸವನಗೌಡ ಪಾಟೀಲ್ : ಮಾನ್ಯ ಅಧ್ಯಕ್ಷರೇ, ಈಗಾಗಲೇ ಮಾನ್ಯ ಗೃಹ ಸಚಿವರು ಉತ್ತರವನ್ನು ಕೊಟ್ಟು ಅದರಲ್ಲಿ ವಿಜಾಪುರದಲ್ಲಿ ಕಳ್ಳತನ ಸ್ವಲ್ಪ ಮಟ್ಟಿಗೆ ಹೆಚ್ಚಾಗಿದೆ ಎಂದು ಹೇಳಿದ್ದಾರೆ. ಇದರಲ್ಲಿ ನನಗನ್ನಿಸುತ್ತದೆ, ಇದರಲ್ಲಿಯೂ ನಿಜವಾಗಿ ಸ್ವಲ್ಪ ಮಟ್ಟ, ಮಧ್ಯಮ ಮಟ್ಟ ಮತ್ತು ಬಹಳ ಮಟ್ಟ ಎನ್ನುವಂಥದ್ದು ಇರುತ್ತದೆಯೋ ಏನೋ ನನಗೆ ಗೊತ್ತಿಲ್ಲ. ಅವರು ಉತ್ತರದಲ್ಲಿ ರಾತ್ರಿ ಗಸ್ತು ತಿರುಗಲು ಪಿ.ಎಸ್.ಐಗಳನ್ನು ನೇಮಿಸಿದ್ದೇವೆ ಎಂದು ಹೇಳಿದ್ದಾರೆ. ಆದರೆ ಇದಕ್ಕೆ ಸಂಬಂಧಪಟ್ಟಂತ ಅಧಿಕಾರಿಗಳು ತಮ್ಮ ಜವಾಬ್ದಾರಿಯನ್ನು ಅರಿತುಕೊಳ್ಳದಿರುವುದರಿಂದ ಇವ್ಹೊತ್ತು ರಾಷ್ಟ್ರೀಯ ಹೆದ್ದಾರಿಯಲ್ಲಿಯೇ ಲಾರಿಗಳನ್ನು ನಿಲ್ಲಿಸಿ ಹಣವನ್ನು ವಸೂಲು ಮಾಡುವುದಕ್ಕೆ ನಿಲ್ಲುತ್ತಿದ್ದಾರೆ. ಇದರಿಂದ ಕಳ್ಳತನಗಳು ವಿಜಾಪುರ ನಗರದಲ್ಲಿ ಹೆಚ್ಚಾಗುತ್ತಿವೆ. ಆದಕಾರಣ ಮಾನ್ಯ ಸಚಿವರು ಇದರ ಕಡೆ ಗಮನವನ್ನು ಕೊಡಬೇಕೆಂದು ನಾನು ಕೇಳಿಕೊಳ್ಳುತ್ತಿದ್ದೇನೆ.

ಶ್ರೀ ಪಿ.ಜಿ.ಆರ್. ಸಿಂಧ್ಯ : ಮಾನ್ಯ ಅಧ್ಯಕ್ಷರೇ, ಮಾನ್ಯ ಸದಸ್ಯರು ಕೆಲವು ಅಧಿಕಾರಿಗಳು ಸರಿಯಾಗಿ ಕೆಲಸವನ್ನು ಮಾಡುತ್ತಿಲ್ಲ ಎನ್ನತಕ್ಕಂಥ ವಿಚಾರವನ್ನು ಹೇಳಿದ್ದಾರೆ. ನಿರ್ದಿಷ್ಟವಾಗಿ ಅವರು ಯಾವ ಅಧಿಕಾರಿ ಎಂದು ಹೇಳಿದರೆ ಅವರ ಮೇಲೆ ನಾನು ಕ್ರಮವನ್ನು ತೆಗೆದುಕೊಳ್ಳುತ್ತೇನೆ. ನಾನು ಉತ್ತರದಲ್ಲಿ ಏನು ಹೇಳಿದ್ದೇನೆ ಎಂದರೆ ವಿಜಾಪುರ ಜಿಲ್ಲೆಯಲ್ಲಿ 1993ರಲ್ಲಿ ಒಟ್ಟು 505 ಕಳ್ಳತನದ ಪ್ರಕರಣಗಳು ವರದಿಯಾಗಿವೆ, ಇದು 1994ರಲ್ಲಿ 565, 1995ರಲ್ಲಿ 586 ಪ್ರಕರಣಗಳು ವರದಿಯಾಗಿವೆ. ಇದನ್ನು ಸ್ವಲ್ಪ ಮಟ್ಟಿಗೆ ಎಂದು ಹೇಳಿದರೆ ತಾವು ಒಪ್ಪಿಕೊಳ್ಳಲೇಬೇಕಾಗುತ್ತದೆ. ಇಲ್ಲ ಎಂದು ಹೇಳಿದರೆ ಅದರಲ್ಲಿ ಅರ್ಥವಿರುವುದಿಲ್ಲ. ಈಗ 15 ಪ್ರಕರಣಗಳು ಜಾಸ್ತಿಯಾಗಿರುವುದು ನಿಜ, ಆದಕಾರಣ ನಾನು ಸ್ವಲ್ಪ ಮಟ್ಟಿಗೆ ಜಾಸ್ತಿಯಾಗಿದೆ ಎಂದು ಹೇಳಿದ್ದೇನೆ. ಯಾರಾದರೂ ಅಧಿಕಾರಿಗಳು ತಪ್ಪು ಮಾಡಿದ್ದಾರೆಂದು ತಮ್ಮ ಗಮನಕ್ಕೆ ಬಂದಿದ್ದರೆ, ಆ ಸಂಬಂಧ ತಮಗೆ ದೂರು ಬಂದಿದ್ದರೆ ನನಗೆ ತಿಳಿಸಿ, ನಾನು ಅವರ ಮೇಲೆ ಕಾನೂನು ಪ್ರಕರವಾಗಿ ಕ್ರಮ ತೆಗೆದುಕೊಳ್ಳುತ್ತೇನೆ.

ಶ್ರೀ ಬಸವನಗೌಡ ಪಾಟೀಲ್ : ಮಾನ್ಯ ಅಧ್ಯಕ್ಷರೇ, ಅವರು ಉತ್ತರದಲ್ಲಿ ರಾಜ್ಯದಲ್ಲಿ ಹಣಕಾಸಿನ ಲಭ್ಯತೆ ಮೇಲೆ 15-20 ಪೋಲೀಸ್ ಠಾಣೆಗಳನ್ನು ಕೊಡುವಂಥ ಯೋಜನೆ ಇದೆಯೆಂದು ಹೇಳಿದ್ದಾರೆ. ಆದರೆ ವಿಜಾಪುರ ನಗರದಲ್ಲಿ ದಿನೇ ದಿನೇ ಬೆಳೆಯುತ್ತಿರುವ ಜನಸಂಖ್ಯೆಯಿಂದಾಗಿ ಹೆಚ್ಚು ಕಳ್ಳತನಗಳು ಆಗುತ್ತಿವೆ. ಆದುದರಿಂದ ದಯವಿಟ್ಟು ಈ ವರ್ಷದ ಅವಧಿಯಲ್ಲಿ 2 ಪೋಲೀಸ್ ಠಾಣೆಗಳನ್ನು ಅಲ್ಲಿಗೆ ಕೊಡಬೇಕೆಂದು ಹೇಳಿ ತಮ್ಮ ಮುಖಾಂತರ ಸಚಿವರನ್ನು ಕೇಳಿಕೊಳ್ಳುತ್ತೇನೆ.

ಶ್ರೀ ಪಿ.ಜಿ.ಆರ್. ಸಿಂಧ್ಯ : ಮಾನ್ಯ ಅಧ್ಯಕ್ಷರೇ, ಈ ವರ್ಷದಲ್ಲಿ ಇಡೀ ರಾಜ್ಯದಲ್ಲಿ ಒಟ್ಟು 20 ಪೋಲಿಸ್ ಠಾಣೆಗಳನ್ನು ಕೊಟ್ಟಿದ್ದೇವೆ. ಇದರಲ್ಲಿ 2 ಪೋಲೀಸ್ ಠಾಣೆಯನ್ನು ವಿಜಾಪುರ ಜಿಲ್ಲೆಗೆ ಮಂಜೂರಾತಿಯನ್ನು ಮಾಡಿದ್ದೇವೆ, ಮುಂದಿನ ಸಾಲಿನಲ್ಲಿ ಇದರ ಬಗ್ಗೆ ಪರಿಶೀಲನೆಯನ್ನು ಮಾಡುತ್ತೇನೆ ಎನ್ನುವ ಭರವಸೆಯನ್ನು ಕೊಡುತ್ತೇನೆ.

ಶ್ರೀ ಜಗದೀಶ್ ಶೆಟ್ಟರು : ರಾಜ್ಯಾದ್ಯಂತ ನಡೆಯುತ್ತಿರುವ ಈ ದರೋಡೆಗಳಿಂದ ಸಾಕಷ್ಟು ಕುಟುಂಬಗಳು ರ್ಥಿಕವಾಗಿ ಮತ್ತು ದೈಹಿಕವಾಗಿ ಸಂಕಷ್ಟಗಳನ್ನು ಅನುಭವಿಸುತ್ತಿವೆ. ಅದಕ್ಕಾಗಿ ಏನಾದರೂ ಸರ್ಕಾರ ಅವರಿಗೆ ಆರ್ಥಿಕ ಸಹಾಯ ನೀಡುವುದಕ್ಕೆ ಸಾಧ್ಯವಿದೆಯೇ ಅಥವಾ ಇಲ್ಲವೇ? ಕಳೆದ 15 ದಿವಸಗಳಲ್ಲಿ ಜಮಖಂಡಿಯಲ್ಲಿ ದರೋಡೆಗಳಾಗಿ ಸಾಕಷ್ಟು ಲಕ್ಷ ರೂಪಾಯಿಗಳನ್ನು ಕಳೆದುಕೊಂಡಿರುವುದಲ್ಲದೇ ದೈಹಿಕವಾಗಿ ಅವರ ಕೈ ಕಾಲು ಮುರಿದು ಸಾಕಷ್ಟು ಹಾನಿ ಮಾಡಿದ್ದಾರೆ. ಆ ಕುಟುಂಬಗಳಿಗೆ ಸರ್ಕಾರ ಏನಾದರೂ ಪರಿಹಾರ ಕೊಡುತ್ತದೆಯೇ?

ಶ್ರೀ ಪಿ.ಜಿ.ಆರ್. ಸಿಂಧ್ಯ : ಮಾನ್ಯ ಅಧ್ಯಕ್ಷರೇ, ಈ ರೀತಿಯ ಪ್ರಸ್ತಾವನೆ ಸರ್ಕಾರದ ಮುಂದೆ ತಕ್ಷಣಕ್ಕೆ ಇಲ್ಲ.

ಅಬಕಾರಿ ಬಾಬಿನಿಂದ ಸರ್ಕಾರಕ್ಕೆ ಬರಬೇಕಾಗಿರುವ ಬಾಕಿ,

69 - ಶ್ರೀ ಬಿ.ಎಸ್. ಯಡಿಯೂರಪ್ಪ (ಶಿಕಾರಿಪುರ) : ಮಾನ್ಯ ಅಬಕಾರಿ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ಜಯವಿಟ್ಟು ಉತ್ತರಿಸುವರೆ?

ಅ) ಅಬಕಾರಿ ಬಾಬಿನಿಂದ ಕಳೆದ ಮೂರು ವರ್ಷಗಳಲ್ಲಿ ಸರ್ಕಾರಕ್ಕೆ ಬಂದ ಆದಾಯವೆಷ್ಟು? (ವರ್ಷವಾರು ಪ್ರತ್ಯೇಕ ವಿವರ ನೀಡುವುದು)

ಆ) ಸರ್ಕಾರಕ್ಕೆ ಬರಬೇಕಾದ ಅಬಕಾರಿ ಶಿಸ್ತು ಇತರೆ ಬಾಕಿ ಎಷ್ಟು, ಯಾರಿಂದ ಬಾಕಿ ಬರಬೇಕಾಗಿದೆ. ಯಾವ ವರ್ಷದಿಂದ ಬಾಕಿ ಇದೆ (ಜಿಲ್ಲಾವಾರು ಕುಳುವಾರು ವಿವರ ನೀಡುವುದು)

ಇ) ಅಬಕಾರಿ ವಸೂಲಿ ಅಧಿನಿಯಮಕ್ಕೆ ತಿದ್ದುಪಡಿ ತಂದ ನಂತರ ವಸೂಲಾತಿಯ ಮೇಲೆ ಆಗಿರುವ ಪರಿಣಾಮವೇನು? ಹಾಗಿದ್ದರೆ ಸರ್ಕಾರ ಸೆಕೆಂಡ್ಸ್ ಹಾವಳಿ ತಡೆಯಲು ಕೈಗೆಂಡ ಕ್ರಮವೇನು?

ಶ್ರೀ ತಿಪ್ಪೇಸ್ವಾಮಿ (ಅಬಕಾರಿ ಸಚಿವರು) :

ಅ) ಕಳೆದ ಮೂರು ವರ್ಷಗಳ ಆದಾಯ ಈ ಕೆಳಕಂಡಂತೆ ಇರುತ್ತದೆ.

ವರ್ಷ (ಆರ್ಥಿಕ)	ರೂ. ಕೋಟಿಗಳಲ್ಲಿ
1992-93	515.26
1993-94	639.07
1994-95	713.47